ಕೃಷಿ ಮಾರುಕಟ್ಟೆ ಇಲಾಖೆಯಿಂದ ಅಭಿವೃದ್ಧಿ ಕಾರ್ಯಗಳು

979 (1439) ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ (ಭಾಲ್ಕಿ) : ಮಾನ್ಯ ಕೃಷಿ ಮಾರುಕಟ್ಟೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೃಷಿ ಮಾರುಕಟ್ಟೆ ಇಲಾಖೆಯ ವತಿಯಿಂದ ಭಾಲ್ಕಿ ವಿಧಾನ ಸಭಾ ಕ್ಷೇತ್ರದಲ್ಲಿ ಕಳೆದ 3 ವರ್ಷಗಳ ಅವಧಿಯಲ್ಲಿ ಯಾವ್ಯಾವ, ಅಭಿವೃದ್ಧಿ ಕಾಮಗಾರಿಗಳನ್ನು ತೆಗೆದುಕೊಳ್ಳಲಾಗಿದೆ (ಪೂರ್ಣ ವಿವರ ನೀಡುವುದು);

ಆ) ಈ ಕಾಮಗಾರಿಗಳಿಗೆ ಮೇಲ್ಕಂಡ ಅವಧಿಯಲ್ಲಿ ಎಷ್ಟು ಹಣವನ್ನು ವೆಚ್ಚ ಮಾಡಲಾಗಿದೆ;

ಇ) ಈ ಪೈಕಿ ಎಷ್ಟು ಹಣವನ್ನು ರಾಜ್ಯ ಸರ್ಕಾರ ನೀಡಿದೆ ಮತ್ತು ಎಷ್ಟು ಹಣವನ್ನು ನಬಾರ್ಡ್ ಅನುದಾನದಿಂದ ಬಳಸಿಕೊಳ್ಳಲಾಗಿದೆ;

ಈ) ಇಲ್ಲಿನ ಕೃಷಿ ಮಾರುಕಟ್ಟೆಗಳಲ್ಲಿ ಕೆಲಸ ಮಾಡುವ ಹಮಾಲರುಗಳಿಗೆ ಯಾವ್ಯಾವ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಿಕೊಡಲಾಗಿದೆ?

ಶ್ರೀ ಶಿವರಾಜ್ ಎಸ್. ತಂಗಡಗಿ (ಕೃಷಿ ಮಾರುಕಟ್ಟೆ ಮತ್ತು ಸಕ್ಕರೆ ಸಚಿವರು) :

ಅ) ವಿವರಗಳನ್ನು ಅನುಬಂಧ–1 ರಲ್ಲಿ ನೀಡಲಾಗಿದೆ.

ಆ) ವಿವರಗಳನ್ನು ಅನುಬಂಧ–1 ರಲ್ಲಿ ನೀಡಲಾಗಿದೆ.

ಇ) ಮೇಲಿನ ಕಾಮಗಾರಿಗಳಿಗೆ ರಾಜ್ಯ ಸರ್ಕಾರದಿಂದ ಯಾವುದೇ ಅನುದಾನ ಒದಗಿಸಿರುವುದಿಲ್ಲ.

ರಾಜ್ಯ ಸರ್ಕಾರವು ಆರ್.ಐ.ಡಿ.ಎಫ್ ಯೋಜನೆಯಡಿಯಲ್ಲಿ 03 ಸಂತೆಗಳ ಅಭಿವೃದ್ಧಿಗೆ ರೂ.30.00 ಲಕ್ಷ ಮಂಜೂರು ಮಾಡಿದೆ. ಇದರಲ್ಲಿ ರೂ.19.00 ಲಕ್ಷ ಬಿಡುಗಡೆಯಾಗಿದ್ದು, ರೂ.11.00 ಲಕ್ಷ ಸರ್ಕಾರದಿಂದ ಬಿಡುಗಡೆಯಾಗಬೇಕಿರುತ್ತದೆ.

ಈ) ಭಾಲ್ಕಿ ಸಮಿತಿಯಲ್ಲಿ ಹಮಾಲರಿಗೆ ಮನೆ ಹಂಚಿಕೆ ಮಾಡಲು ಜಮೀನು ಇಲ್ಲದ ಪ್ರಯುಕ್ತ ರಾಜೀವ್ ಗಾಂಧಿ ಯೋಜನೆಯಡಿಯಲ್ಲಿ ಮನೆ ಹಂಚಿಕೆಗೆ ಪುರ ಸಭೆಯವರಿಗೆ ಹಮಾಲರ ವಿವರಗಳನ್ನು ಸಲ್ಲಿಸಿದೆ. ಹಮಾಲರಿಗೆ ವಿಮಾ ಯೋಜನೆ ಜಾರಿಗೊಳಿಸಿದೆ.

ಅನುಬಂಧ– 1

ಕ್ರ ಸಂ.	ಕಾಮಗಾರಿಯ ಹೆಸರು	ವೆಚ್ಚ ಮಾಡಿದ ಹಣ ರೂ.	ಷರಾ
	2006–07		
1	ಮು.ಮಾ. ಪ್ರಾಂತದಲ್ಲಿನ ರಸ್ತೆ ನಿರ್ಮಾಣ (ಜಿಲ್ಲಾ ಪಂಚಾಯತ್ ಅನುದಾನದಡಿ)	2,67,161	
2	ಮು.ಮಾ.ಪ್ರಾಂ. ದಲ್ಲಿನ ಆಡಳಿತ ಕಛೇರಿ ಮುಂಭಾಗದ ರಸ್ತೆ ಡಾಂಬರೀಕರಣ (ಜಿಲ್ಲಾ ಪಂಚಾಯತ್ ಅನುದಾನದಡಿ)	2,24,986	
3	ನಿವೇಶನ ಸಂ:1 ರಿಂದ 6ರ ವರೆಗಿನ ರಸ್ತೆ ನಿರ್ಮಾಣ (ಜಿಲ್ಲಾ ಪಂಚಾಯತ್ ಅನುದಾನದಡಿ)	70,996	
4	ಮು.ಮಾ.ಪ್ರಾಂ.ದಲ್ಲಿ ಹೊಸದಾಗಿ ನಿರ್ಮಿಸಿರುವ ನಿವೇಶನಗಳನ್ನು ಗುರುತಿಸಿ ಹೊಸದಾಗಿ ನಿರ್ಮಾಣ (ಟೆ.ಪ್ರಾ ವೆಚ್ಚ)	1,000	
	ಖಾನಾಪೂರ ಗ್ರಾಮದಲ್ಲಿ ಗ್ರಾಮೀಣ ಸಂತೆ ನಿರ್ಮಿಸುವುದು.	2,500	
5	ಭಾತಂಬ್ರ ಗ್ರಾಮದಲ್ಲಿ ಗ್ರಾಮೀಣ ಸಂತೆ ನಿರ್ಮಿಸುವುದು.	3,417	
	ನಿಯಮ 71 ರಡಿ		
6	ಮು.ಮಾ.ಪ್ರಾಂ.ದಲ್ಲಿ ನೀರಿನ ತೊಟ್ಟಿ ನಿರ್ಮಿಸುವುದು	9,977	
7	ಮು.ಮಾ.ಪ್ರಾಂದಲ್ಲಿ ನೀರಿನ ತೊಟ್ಟಿ ನಿರ್ಮಿಸುವುದು.	9,977	
8	ಮು.ಮಾ.ಪ್ರಾಂದಲ್ಲಿ ನೀರಿನ ತೊಟ್ಟಿ ನಿರ್ಮಿಸುವುದು.	9,977	

	ಒಟ್ಟು	5,99,959	
	2007–08		
1	ಪ್ರಾಂಗಣದಲ್ಲಿ ಒಂದು ಕೊಳವೆ ಬಾವಿ ತೋಡಿಸುವುದು, ಹಳೆ ಕೊಳವೆ ಬಾವಿಗೆ ರೀಡ್ರಿಲ್ ಮಾಡಿಸುವುದು.	79,566	
2.	ಆಡಳಿತ ಕಚೇರಿಗೆ ಮರು ವಿದ್ಯುತ್ತೀಕರಣ	67,230	
3.	ಮು.ಮ.ಪ್ರಾಂ.ದ ನಿವೇಶನದ ಡಿಮಾರ್ಕೆಶನ್ ಮತ್ತು ಫಾರ್ ಮೇಶನ್ ಹೊಸದಾಗಿ ಗೋಡೆ ನಿರ್ಮಿಸುವುದು.	2,89,048	
	– ಸದರಿ 2ನೇ ಹಾಗೂ ಅಂತಿಮ ಬಿಲ್	59,878	
4	ಮು.ಮಾ.ಪ್ರಾಂ.ದಲ್ಲಿ ರಸ್ತೆ ಮತ್ತು ಹೊಸ ರಸ್ತೆ ಸುಧಾರಣೆ.	1,50,243	
5	ಮು.ಮಾ.ಪ್ರಾಂ.ದಲ್ಲಿ ಬಿ.ಟಿ. ರಸ್ತೆ ನಿರ್ಮಾಣ 2ನೇ ಹಾಗೂ ಅಂತಿಮ ಬಿಲ್	36,979	
6	ಮು.ಮಾ. ಪ್ರಾಂ.ದಲ್ಲಿ ಬಿ.ಟಿ. ರಸ್ತೆ (1 ರಿಂದ 6) 2ನೇ ಹಾಗೂ ಕೊನೆ ಬಿಲ್	5,304	
7	ಭಾತಂಬ್ರ ಗ್ರಾಮದಲ್ಲಿ ಗ್ರಾಮೀಣ ಸಂತೆ ಕಾಮಗಾರಿ 1ನೇ ಹಾಗೂ ಭಾಗಶಃ	1,86,798	
	ಭಾತಂಬ್ರ ಗ್ರಾಮದಲ್ಲಿ ಗ್ರಾಮೀಣ ಸಂತೆ ಕಾಮಗಾರಿ 1ನೇ ಹಾಗೂ ಭಾಗಶಃ	4,08,830	

8	ಉ.ಮಾ.ಖಾನಾಪೂರ ಗ್ರಾಮದಲ್ಲಿ ಆರ್.ಐ.ಡಿ.ಎಫ್ ಯೋಜನೆಯಡಿ ಗ್ರಾಮೀಣ ಸಂತೆ	4,95,830	
	– ಸದರ –	5,79,244	
9	ಮು.ಮಾ.ಪ್ರಾಂ.ದಲ್ಲಿ ಹೈಮಾಸ್ಟ್ ವಿದ್ಯುತ್ ದೀಪ ಅಳವಡಿಸುವುದು 1ನೇ ಹಾಗೂ ಚಾಲ್ತಿ ಬಿಲ್	1,41,972	
10	ಮು.ಮಾ.ಪ್ರಾಂ.ದಲ್ಲಿ ಆಡಳಿತ ಕಛೇರಿಗೆ ಬರುವ ರಸ್ತೆಯನ್ನು ಡಾಂಬರೀಕರಣ ಮಾಡುವುದು 1ನೇ ಬಿಲ್	1,08,319	
	ನಿಯಮ 71 ರಡಿಯಲ್ಲಿ		
11	ಆಡಳಿತ ಕಛೇರಿಯ ರಸ್ತೆಗೆ ಮುರುಮಾ ಹಾಕುವುದು	14,474	
12	ಆಡಳಿತ ಸರ್ವಿಸ್ ಡ್ರೆನರಿಗೆ ಮಾಡುವುದು	14,474	
13	ಆಡಳಿತ ವರ್ಗ – 2 ಮೆಟಲಿಂಗ್	14,905	
14	ಆಡಳಿತ 3 – ಸದರ –	14,906	
15	ಆಡಳಿತ ರಸ್ತೆಗೆ ವರ್ಗ 2 ಮೆಟಲಿಂಗ್	14,888	
16	ಸದರ ವರ್ಗ 3 ಸದರ	14,415	
	ಒಟ್ಟು	**26,97,317**	
	2008–09		
1	ಭಾಲ್ಕಿ ಹೈಮಾಸ್ಟ್ ವಿದ್ಯುತ್ ಅಳವಡಿಕೆ ಕಾಮಗಾರಿ	2,62,172	
2	ಭಾಲ್ಕಿ ಆಡಳಿತ ಕಛೇರಿ ಎದುರಗಡೆ ಡಾಂಬರೀಕರಣ	1,44,163	
3	ಭಾಲ್ಕಿ ಆಡಳಿತ ಕಛೇರಿ ಸುಧಾರಣೆ	26,509	
4	ಖಾನಾಪೂರ ಉಪ ಮಾರುಕಟ್ಟೆ	44,616	

	ಆಡಳಿತ ಕಛೇರಿ ಸುಧಾರಣೆ		
5	ಖಾನಾಪೂರ ಉಪ ಮಾರುಕಟ್ಟೆ ಜಾನೂವಾರ ಕೊಟ್ಟಿಗೆ ಸುಧಾರಣೆ	21,225	
6	ಭಾತಂಬ್ರಾ ಗ್ರಾಮೀಣ ಸಂತೆ ಕಾಮಗಾರಿ	6,64,731	
7	ಲಖನಗಾಂವ ಗ್ರಾಮೀಣ ಸಂತೆ ಕಾಮಗಾರಿ	11,26,333	
8	ನಳಸಂಗ ಗ್ರಾಮದಲ್ಲಿ ನೀರಿನ ತೊಟ್ಟಿ ನಿರ್ಮಿಸುವ ಕಾಮಗಾರಿ	49,603	
9	ಧನ್ನೂರಾ ಗ್ರಾಮದಲ್ಲಿ ನೀರಿನ ತೊಟ್ಟಿ ನಿರ್ಮಿಸುವ ಕಾಮಗಾರಿ	49,667	
10	ಕಸರಜವಳಗಾ ಗ್ರಾಮದಲ್ಲಿ ನೀರಿನ ತೊಟ್ಟಿ ನಿರ್ಮಿಸುವ ಕಾಮಗಾರಿ	49,602	
11	ಹಾಳಗೋರ್ಟಾ ಗ್ರಾಮದಲ್ಲಿ ನೀರಿನ ತೊಟ್ಟಿ ನಿರ್ಮಿಸುವ ಕಾಮಗಾರಿ	49, 602	
12	ಭ್ಯಾಲಹಳ್ಳಿ ಗ್ರಾಮದಲ್ಲಿ ನೀರಿನ ತೊಟ್ಟಿ ನಿರ್ಮಿಸುವ ಕಾಮಗಾರಿ	49,624	
13	ಸಿದ್ದೇಶ್ವರ ಗ್ರಾಮದಲ್ಲಿ ನೀರಿನ ತೊಟ್ಟಿ ನಿರ್ಮಿಸುವ ಕಾಮಗಾರಿ	43,497	
	ಒಟ್ಟು	25,81,344	

980 (1440) ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ (ಭಾಲ್ಕಿ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಲೋಕೋಪಯೋಗಿ ಇಲಾಖೆ ವತಿಯಿಂದ ಭಾಲ್ಕಿ ಮತ ಕ್ಷೇತ್ರದಲ್ಲಿ ಕಳೆದ ಮೂರು ವರ್ಷಗಳ ಅವಧಿಯಲ್ಲಿ ಯಾವ್ಯಾವ ಕಾಮಗಾರಿ ಗಳನ್ನು ತೆಗೆದುಕೊಳ್ಳಲಾಗಿತ್ತು; ಇದಕ್ಕೆ ವೆಚ್ಚ ಮಾಡಲಾಗಿರುವ ಹಣವೆಷ್ಟು (ಕಾಮಗಾರಿವಾರು ವಿವರ ನೀಡುವುದು);